**ಪಾಠ-12** **ಸೆಪ್ಟೆಂಬರ್ 12-18**

# ಹಂಚಿಕೊಳ್ಳಲು ಯೋಗ್ಯವಾದ ಸಂದೇಶ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** 2 ಪೇತ್ರ 1:12,16–21; ಪ್ರಕಟನೆ 19:11–18; ಪ್ರಕಟನೆ 14:14–20; ಪ್ರಸಂಗಿ 12:13,14; ಪ್ರಕಟನೆ 14:6–12.

**ಸ್ಮರಣವಾಕ್ಯ : "ಮತ್ತೊಬ್ಬ ದೇವದೂತನು ಆಕಾಶಮಧ್ಯದಲ್ಲಿ ಹಾರಿ ಹೋಗುವುದನ್ನು ಕಂಡೆನು. ಭೂನಿವಾಸಿಗಳಾಗಿರುವ ಸಕಲ ಜನಾಂಗ ಕುಲ ಪ್ರಜೆಗಳವರಿಗೂ ಸಕಲ ಭಾಷೆಗಳನ್ನಾಡುವವರಿಗೂ, ಸಾರಿ ಹೇಳುವುದಕ್ಕೆ ನಿತ್ಯವಾದ ಶುಭವರ್ತಮಾನವು ಅವನಲ್ಲಿತ್ತು. ಅವನು ನೀವೆಲ್ಲರು ದೇವರಿಗೆ ಭಯಪಟ್ಟು ಆತನನ್ನು ಘನಪಡಿಸಿರಿ, ಆತನು ನ್ಯಾಯತೀರ್ಪು ಮಾಡುವ ಗಳಿಗೆಯು ಬಂದಿದೆ. ಭೂಲೋಕ ಪರಲೋಕಗಳನ್ನೂ ಸಮುದ್ರವನ್ನೂ ನೀರಿನ ಬುಗ್ಗೆಗಳನ್ನೂ ಉಂಟು ಮಾಡಿದಾತನಿಗೆ ನಮಸ್ಕಾರ ಮಾಡಿರಿ ಎಂದು ಮಹಾಶಬ್ದದಿಂದ ಹೇಳಿದೆನು"** (ಪ್ರಕಟನೆ 14:6,7).

ಕ್ರಿಸ್ತನ ಪ್ರಾಯಶ್ಚಿತ್ತ ಸಾವು ವಿಶ್ವವ್ಯಾಪಿಯಾಗಿತ್ತು (ಸಾರ್ವತ್ರಿಕವಾಗಿತ್ತು). ಅಂದರೆ ಇದು ಯಾವಾಗ ಅಥವಾ ಎಲ್ಲಿ ಎಂದು ಲೆಕ್ಕಿಸದೆ, ಇದುವವರೆಗೂ ಬದುಕಿರುವ ಎಲ್ಲಾ ಜನರಿಗೂ ಅರ್ಥವನ್ನು ಕೊಡುತ್ತದೆ. ಹೀಗೆ, ಸುವಾರ್ತೆಯು ಪ್ರತಿಯೊಂದು ಭಾಷೆ, ಸಂಸ್ಕೃತಿ ಮತ್ತು ಹಿನ್ನೆಲೆ ಇರುವ ಜನರ ಗುಂಪಿನೊಂದಿಗೆ ಮಾತನಾಡುತ್ತದೆ. ಇದು ಜನಾಂಗೀಯ ವಿಂಗಡನೆಗೆ ಸೇತುವೆಯಾಗಿದೆ. ಯೇಸು ತನ್ನ ಜೀವನ, ಮರಣ ಮತ್ತು ಪುನರುತ್ಥಾನದಲ್ಲಿ ನರಕದ ಪ್ರಭುತ್ವಗಳ ಮೇಲೆಯೂ

ಮತ್ತು ಅಧಿಕಾರಗಳ ಮೇಲೆಯೂ ಜಯವನ್ನು ಸಾಧಿಸಿದ್ದಾನೆ ಎಂಬುದು ನಂಬಲಾಗದಷ್ಟು ಒಳ್ಳೆಯ ಸುದ್ದಿಯಾಗಿದೆ. ಸುವಾರ್ತೆಯು ಯೇಸುವಿನ ಬಗ್ಗೆ ಇದೆ. ಆತನು ನಮಗಾಗಿ ಸತ್ತನು ಮತ್ತು ಈಗ ನಮಗಾಗಿ ಜೀವಿಸುವವನಾಗಿದ್ದಾನೆ. ಆತನು ನಮ್ಮನ್ನು ಪಾಪದ ದಂಡನೆ ಮತ್ತು ಶಕ್ತಿಯಿಂದ ಬಿಡುಗಡೆಗೊಳಿಸುವುದಕ್ಕೆ ಒಮ್ಮೆ ಬಂದನು ಮತ್ತು ಪಾಪದ ಸಮಕ್ಷಮದಿಂದ ವಿಮೋಚಿಸಲು ಮತ್ತೆ ಬರುತ್ತಿದ್ದಾನೆ. ಆತನು ಹೊಂದಿದ ಜೀವನವನ್ನು ನಾವು ಅನುಭವಿಸಬಹುದೆಂದು ಆತನು ನಾವು ಅರ್ಹರಾಗಿದ್ದ ಮರಣವನ್ನು ಅನುಭವಿಸಿದನು. ಕ್ರಿಸ್ತನಲ್ಲಿ ನಾವು ಸಮರ್ಥಿಸಲ್ಪಟ್ಟಿದ್ದೇವೆ, ಪವಿತ್ರರಾಗಿದ್ದೇವೆ ಮತ್ತು ಒಂದು ದಿನ ಮಹಿಮೆಗೊಳಿಸಲ್ಪಡುತ್ತೇವೆ.

ಸತ್ಯವೇದವು ಯೇಸುವಿನ ಎರಡು ಬರೋಣಗಳ ಮೇಲೆ ಕೇಂದ್ರೀಕರಿಸುತ್ತದೆ. ನಮ್ಮನ್ನು ವಿಮೋಚಿಸಲು ಆತನು ಒಮ್ಮೆ ಬಂದನು ಮತ್ತು ಅಪರಿಮಿತವಾದ ಕ್ರಯವನ್ನು ಕೊಟ್ಟು ಕೊಂಡುಕೊಂಡಿದ್ದ ನಮ್ಮನ್ನು ಮನೆಗೆ ಕರೆದುಕೊಂಡು ಹೋಗಲು ಆತನು ಮರಳಿ ಬರಲಿದ್ದಾನೆ. ಈ ಜನಾಂಗಕ್ಕೆ ಇದು ತುರ್ತು ಸಂದೇಶವಾಗಿದೆ. ಈ ವಾರದ ಪಾಠದಲ್ಲಿ, 21ನೇ ಶತಮಾನದ ಸಮಕಾಲೀನ ಸಮಾಜಕ್ಕಾಗಿ ಪ್ರಕಟನೆಯ ಪ್ರಾಧಾನ್ಯತೆಯನ್ನು ನಾವು ಅಧ್ಯಯನ ಮಾಡುತ್ತೇವೆ. ಈ ಅಂತ್ಯಕಾಲದ ಸಂದೇಶವನ್ನು ಹಂಚಿಕೊಳ್ಳಲು ಯೇಸು ತನ್ನ ಕಡೆಯ ದಿವಸದ ಸಭೆಗೆ ಹೊಸದಾಗಿ ಮಾಡಿದ ಮನವಿಯನ್ನು ನಾವು ಒಟ್ಟಾಗಿ ಬಹಿರಂಗಪಡಿಸೋಣ.

**ಭಾನುವಾರ** **ಸೆಪ್ಟೆಂಬರ್ 13**

## ಪೇತ್ರನ ಪ್ರಸ್ತುತ ಸತ್ಯ ಸಂದೇಶ

ಶೀಘ್ರದಲ್ಲೇ ಬರುವುದಕ್ಕಿದ್ದ ಘಟನೆಗೆ ಜನರನ್ನು ಸಿದ್ಧಪಡಿಸಲು ದೇವರು ನಿಯಮಿತವಾಗಿ ಪ್ರವಾದನಾ ವಾಕ್ಯದ ಮೂಲಕ ವಿಶೇಷ ಸಂದೇಶವೊಂದನ್ನು ರಕ್ಷಣೆ ಇತಿಹಾಸದುದ್ದಕ್ಕೂ ಕಳುಹಿಸಿದ್ದಾನೆ. ದೇವರು ಅನಿರೀಕ್ಷಿತವಾದದ್ದನ್ನು ಮಾಡುವ ಮೂಲಕ ಅಥವಾ ಹೇಳುವ ಮೂಲಕ ಯಾರನ್ನು ಎಂದಿಗೂ ಅಚ್ಚರಿಗೊಳಿಸುವುದಿಲ್ಲ (ಯೆಶಾಯ 46:9,10). ನ್ಯಾಯತೀರ್ಪು ಬರುವ ಮೊದಲೇ

ತನ್ನ ಸಂದೇಶವನ್ನು ಬಹಿರಂಗಪಡಿಸುವುದಕ್ಕೆ ಪ್ರವಾದಿಗಳನ್ನು ಕಳುಹಿಸುವ ಮೂಲಕ ತನ್ನ ಜನರನ್ನು ಭವಿಷ್ಯಕ್ಕೆ ಸಿದ್ಧಪಡಿಸುತ್ತಾನೆ (ಆಮೋಸ 3:7). ಜಲಪ್ರಳಯವುಂಟಾಗುವ ಮೊದಲೇ, ಜಲಪ್ರಳಯವು ಬರುತ್ತಿದೆ ಎಂದು ದೇವರು ನೋಹನ ಮೂಲಕ ಲೋಕಕ್ಕೆ ಸಂದೇಶವನ್ನು ಕಳುಹಿಸಿದನು. ಐಗುಪ್ತ ದೇಶದಲ್ಲಿ ಬರಲಿದ್ದ ಏಳು ವರ್ಷಗಳ ಸಮೃದ್ಧಿಯ ಸಮಯದಲ್ಲಿ ಬರಗಾಲಕ್ಕಾಗಿ ಸಿದ್ಧಪಡಿಸಲು ದೇವರು ಯೋಸೇಫನನ್ನು ಎಬ್ಬಿಸಿದನು. ಬಾಬೆಲಿನವರ ಸೈನ್ಯಗಳಿಂದ ಮುಂದೆ ಯೆರೂಸಲೇಮಿಗೆ ಆಗಮಿಸಲಿದ್ದ ವಿನಾಶದ ಕುರಿತು ಯೆಹೂದಿ ಪ್ರವಾದಿಗಳು ಇಸ್ರಾಯೇಲ್ಯರ ನಾಯಕರನ್ನು ಎಚ್ಚರಿಸಿದರು. ಸ್ನಾನಿಕನಾದ ಯೋಹಾನನ ಪಶ್ಚಾತ್ತಾಪದ ಸಂದೇಶವು ಯೇಸುವಿನ ಮೊದಲನೆಯ ಬರೋಣಕ್ಕೆ ಒಂದು ಜನಾಂಗವನ್ನು ಸಿದ್ಧಪಡಿಸಿತು.

2 ಪೇತ್ರ 1:12 ಓದಿರಿ. ದೇವರ ಸಂದೇಶವನ್ನು ತನ್ನ ಸಂತತಿಯವರಿಗೆ ವಿವರಿಸಲು ಪೇತ್ರನು ಬಳಸಿದ ಶಬ್ದ ಪ್ರಯೋಗ ಯಾವುದು?

________________________________________

________________________________________

2 ಪೇತ್ರ 1:16–21 ಓದಿರಿ. ಪೇತ್ರ ಮತ್ತು ಶಿಷ್ಯರು ಸಾರಿದ ಈ "ಪ್ರಸ್ತುತ ಸತ್ಯ" ಸಂದೇಶ ಯಾವುದು?

________________________________________

________________________________________

ಕ್ರಿಸ್ತನು ಬಂದಿದ್ದಾನೆ ಎಂಬುದು ಮೊದಲನೆಯ ಶತಮಾನಕ್ಕೆ ಎಂದೆಂದಿಗೂ ಇರುವ ಪ್ರಾಮುಖ್ಯತೆಯ ಸಂದೇಶವಾಗಿತ್ತು. ಶಿಲುಬೆಯ ಮೇಲೆ ಕ್ರಿಸ್ತನು ಮಾಡಿದ ತ್ಯಾಗದ ಮೂಲಕ ತಂದೆಯ ಪ್ರೀತಿಯು ಪ್ರಕಟವಾಯಿತು. "ಪಾಪದ ಸಂಬಳ ಮರಣ" ಆಗಿದ್ದರೂ, ಕ್ರಿಸ್ತನ ಮೂಲಕ ಎಲ್ಲರಿಗೂ ನಿತ್ಯಜೀವನವನ್ನು ಭದ್ರಪಡಿಸಲಾಯಿತು. ನಂಬಿಕೆಯ ಮೂಲಕ ಅದನ್ನು ಸ್ವೀಕರಿಸುತ್ತೇವೆಯೇ ಎಂಬುದು ನಮ್ಮ ಆಯ್ಕೆಯಾಗಿದೆ (ರೋಮಾ 3:23; ರೋಮಾ 6:23;

ಎಫೆಸ 2:8). ಯೇಸುವಿನಲ್ಲಿರುವ ರಕ್ಷಣೆಯ ಈ ಸಂದೇಶವು ಎಂದಿಗೂ ಹಳೆಯ ಶೈಲಿಯಾಗುವುದಿಲ್ಲ. ಪ್ರತಿಯೊಂದು ಸಂತತಿಗೆ ಇದು ಪ್ರಸ್ತುತ ಸತ್ಯವಾಗಿದೆ.

ಸತ್ಯವೇದದ ಕೊನೆಯ ಪುಸ್ತಕವಾದ ಪ್ರಕಟನೆಯ ಆತನ ಶೀಘ್ರ ಬರೋಣಕ್ಕಾಗಿ ಜನರನ್ನು ಸಿದ್ಧಪಡಿಸಲು ಯೇಸು ಮತ್ತು ಆತನ ನಿತ್ಯರಕ್ಷಣೆಯನ್ನು ಅಂತ್ಯಕಾಲದ ಸನ್ನಿವೇಶದಲ್ಲಿ ಪ್ರಸ್ತುತಪಡಿಸುತ್ತದೆ. ಇದು ಮಾನವ ಸಂಪ್ರದಾಯದ ಸುಳ್ಳನ್ನು ಮತ್ತು ಸ್ವಯಂಕೇಂದ್ರಿತ ಧರ್ಮನಿಷ್ಠೆಯನ್ನು ಬಹಿರಂಗಪಡಿಸುತ್ತದೆ.

ಯೇಸು ತನ್ನ ತಂದೆಯ ಗುಣದ ನಿಜವಾದ ಸಾಕ್ಷಿಯಾಗಿದ್ದಾನೆ. ಆತನು "ಭೂಮಿಯ ರಾಜರ ಮೇಲೆ ಆಡಳಿತಗಾರನಾಗಿದ್ದಾನೆ". ಆತನೊಬ್ಬನೇ ತಾನೇ "ನಮ್ಮನ್ನು ಪ್ರೀತಿಸಿ, ತನ್ನ ಸ್ವ–ರಕ್ತದಿಂದ ನಮ್ಮ ಪಾಪಗಳನ್ನು ತೊಳೆದು, ತನ್ನ ತಂದೆಯಾದ ದೇವರಿಗೆ ನಮ್ಮ ರಾಜರುಗಳನ್ನಾಗಿಯೂ ಮತ್ತು ಯಾಜಕರನ್ನಾಗಿಯೂ ಮಾಡಿದ್ದಾನೆ" (ಪ್ರಕಟನೆ 1:1–6 ನೋಡಿ). ಪ್ರಕಟನೆಯು ಯೇಸು ಮತ್ತು ಆತನ ಅಂತ್ಯಕಾಲದ ಸಂದೇಶದ ಬಗ್ಗೆ ಇದೆ, ಅದು ಆತನ ಶೀಘ್ರ ಬರೋಣಕ್ಕಾಗಿ ಆತನ ಜನರನ್ನು ಸಿದ್ಧಪಡಿಸುತ್ತದೆ.

ನೀವು ಪ್ರಕಟನೆಯ ಪುಸ್ತಕ ಕುರಿತು ಆಲೋಚಿಸುವಾಗ, ನಿಮ್ಮ ಮನಸ್ಸಿಗೆ ಏನು ಬರುತ್ತದೆ? ನಿಮ್ಮ ಆಲೋಚನೆಗಳು ಯೇಸುವಿಗಿಂತ ಮೃಗಗಳು ಮತ್ತು ಪ್ರವಾದನ ಚಿಹ್ನೆಗಳ ಮೇಲೆ ಹೆಚ್ಚಾಗಿರುತ್ತದೆಯೇ? ಯೇಸು ನಮಗೆ ಪ್ರಕಟನೆಯಲ್ಲಿ ಪ್ರವಾದನೆಗಳನ್ನು ಕೊಟ್ಟನು ಎಂದು ನೀವು ಏಕೆ ಆಲೋಚಿಸುತ್ತೀರಿ? ಮಾನವ ಕುಲಕ್ಕಾಗಿ ಆತನ ಪ್ರೀತಿಯುಳ್ಳ ಯೋಜನೆಗಳನ್ನು ಅವುಗಳು ಹೇಗೆ ಪ್ರಚುರಪಡಿಸುತ್ತವೆ?

**ಸೋಮವಾರ** **ಸೆಪ್ಟೆಂಬರ್ 14**

## ಪ್ರಕಟನೆಯ ಅಂತ್ಯಕಾಲದ ಗಮನ

ಸುವಾರ್ತೆಗಳು ಪ್ರಾಥಮಿಕವಾಗಿ ಕ್ರಿಸ್ತನ ಮೊದಲನೆಯ ಬರೋಣದ ಮೇಲೆ ಕೇಂದ್ರೀಕರಿಸುತ್ತವೆ. ಅವುಗಳು ಆತನ ಜನನ, ಆತನ ಜೀವನ ಮತ್ತು ಸೇವೆ ಹಾಗೂ ಆತನ ಮರಣ ಮತ್ತು ಪುನರುತ್ಥಾನದ ಕಥೆಗಳನ್ನು ಹೇಳುತ್ತವೆ. ಅವುಗಳು ಆತನ ಎರಡನೆಯ ಬರೋಣದ ಬಗ್ಗೆ ಮಾತನಾಡಿದರು ಸಹ,

ಅವು ಅದಕ್ಕೆ ಹೆಚ್ಚು ಒತ್ತು ನೀಡುವುದಿಲ್ಲ. ಪ್ರಕಟನೆಯ ಪುಸ್ತಕದ ಪ್ರಾಥಮಿಕ ಗಮನವು, ಶತಮಾನದಷ್ಟು ದೀರ್ಘವಾಗಿ ನಡೆಯುವ ಯುಗಗಳ ಹೋರಾಟದ ಪರಾಕಷ್ಠತೆಯಾಗಿದೆ. ಅದರ ಪ್ರತಿಯೊಂದು ಪ್ರವಾದನೆಗಳು ನಮ್ಮ ಕರ್ತನ ಮಹಿಮೆಯುಳ್ಳ ಪುನರಾಗಮನದಲ್ಲಿ ಅಂತ್ಯಗೊಳ್ಳುತ್ತದೆ.

ಪ್ರಕ 1:7; ಪ್ರಕ 11:15; ಪ್ರಕ 14:14–20; ಮತ್ತು ಪ್ರಕ 19:11–18 ಓದಿರಿ. ಪ್ರತಿಯೊಂದು ವಾಕ್ಯಭಾಗಗಳಲ್ಲಿ ಯಾವ ರೀತಿಯ ಅಂತ್ಯವನ್ನು ನೀವು ಕಾಣುತ್ತೀರಿ?

ಪ್ರಕಟನೆಯ ಪುಸ್ತಕದ ಮೊದಲನೆಯ ಅಧ್ಯಾಯದಿಂದ ಕೊನೆಯ ಅಧ್ಯಾಯದವರೆಗೆ ಬರುವ ಪ್ರತಿಯೊಂದು ಪ್ರವಾದನೆಯು ಯೇಸುವಿನ ಬರೋಣದಲ್ಲಿ ಅಂತ್ಯವಾಗುತ್ತದೆ. "ವಧಿತನಾದ ಕುರಿಯಾದಾತನು" (ಪ್ರಕಟನೆ 5:12) ರಾಜಾಧಿರಾಜನಾಗಿ ಕರ್ತರ ಕರ್ತನಾಗಿ ಮತ್ತೇ ಬರುತ್ತಾನೆ (ಪ್ರಕಟನೆ 19:16). ಆತನು ತನ್ನ ಜನರನ್ನು ದಬ್ಬಾಳಿಕೆ ಮಾಡುವ ಮತ್ತು ಹಿಂಸೆಪಡಿಸುವ ಎಲ್ಲಾ ವೈರಿಗಳನ್ನು ಸೋಲಿಸುವನು (ಪ್ರಕ 17:14). ಆತನು ಅವರನ್ನು ಪಾಪವೆಂಬ ದುಸ್ವಪ್ನದಿಂದ ಬಿಡಿಸಿ ಮಹಿಮೆಯುಳ್ಳ ಮನೆಗೆ ಬರಮಾಡುವನು. ಒಳ್ಳೆಯದರ ಮತ್ತು ಕೆಟ್ಟದರ ನಡುವಿನ ಮಹಾಹೋರಾಟವು ಅಂತ್ಯವಾಗುವುದು. ಭೂಮಿಯನ್ನು ಹೊಸದಾಗಿ ಉಂಟುಮಾಡುವನು, ಮತ್ತು ವಿಮೋಚಿಸಲ್ಪಟ್ಟವರು ತಮ್ಮ ಕರ್ತನೊಂದಿಗೆ ಯುಗಯುಗಾಂತರಕ್ಕೂ ಜೀವಿಸುವರು (ಪ್ರಕ 21:1–4).

ಪ್ರಕಟನೆ 22:7ರಲ್ಲಿ (ಪ್ರಕ 22:12, 17 ಮತ್ತು 20 ಸಹ ನೋಡಿ), "ಇಗೋ ಬೇಗನೆ ಬರುತ್ತೇನೆ! ಈ ಪುಸ್ತಕದಲ್ಲಿ ಬರೆದಿರುವ ಪ್ರವಾದನೆಯ ಮಾತುಗಳನ್ನು ಕೈಕೊಂಡು ನಡೆಯುವವನು ಧನ್ಯನು" ಎಂದು ಯೇಸು ಹೇಳುತ್ತಾನೆ. ಆದ್ದರಿಂದ, ಎಲ್ಲಾ ಮಾನವ ಕುಲಕ್ಕೆ ಯೇಸುವಿನ ಅಂತಿಮ ಮನವಿಯೇನೆಂದರೆ ಆತನ ಪ್ರೀತಿಗೆ ಪ್ರತಿಕ್ರಿಯಿಸುವುದು, ಆತನ ಕೃಪೆಯನ್ನು ಅಂಗೀಕರಿಸುವುದು, ಮತ್ತು ಆತನ ಸತ್ಯವನ್ನು ಅನುಸರಿಸುವ ಮೂಲಕ ಆತನ ಶೀಘ್ರ ಪುನರಾಗಮನಕ್ಕೆ ಸಿದ್ಧರಾಗುವುದು. ಯೇಸುವಿನ ಆಮಂತ್ರಣದೊಂದಿಗೆ ಪ್ರಕಟನೆಯು ಮುಕ್ತಾಯಗೊಳ್ಳುತ್ತದೆ" ಆತ್ಮನೂ ಮದಲಗಿತ್ತಿಯೂ "ಬಾ" ಅನ್ನುತ್ತಾರೆ! ಕೇಳುವವನು– "ಬಾ ಅನ್ನಲಿ!" (ಪ್ರಕಟನೆ 22:17).

ನಮ್ಮ ಕರ್ತನು ನಿತ್ಯಜೀವವನ್ನು ಹುಡುಕುವ ಎಲ್ಲರನ್ನೂ ತನ್ನ ಬಳಿಗೆ ಬರಲು ಆಹ್ವಾನಿಸುತ್ತಾನೆ. ನಂತರ ಆತನು ನಮ್ಮಲ್ಲಿ ರಕ್ಷಣೆಯ ಸಂದೇಶವನ್ನು ಅಂಗೀಕರಿಸಿದವರನ್ನು ಆಹ್ವಾನಿಸುತ್ತಾನೆ, ಮತ್ತು ಆತನ ಪುನರಾಗಮನಕ್ಕೆ ಕಾತುರದಿಂದ ಕಾಯುತ್ತಿರುವವರು, ಆತನ ಪ್ರೀತಿಯ ಸಂದೇಶವನ್ನು ಇತರರು ಅಂಗೀಕರಿಸಿಕೊಳ್ಳುವುದಕ್ಕೆ ಆಹ್ವಾನಿಸಲು ಆತನ ಜೊತೆಗೆ ಸೇರಿಕೊಳ್ಳಲು ಆಹ್ವಾನಿಸುತ್ತಾನೆ. ಆತನ ಸಂದೇಶವನ್ನು ಹಂಚಿಕೊಂಡು, ಆತನ ಶೀಘ್ರ ಪುನರಾಗಮನಕ್ಕೆ ಲೋಕವನ್ನು ಸಿದ್ಧಗೊಳಿಸುವ ಸಲುವಾಗಿ ನಮ್ಮನ್ನು ಆತನ ಧರ್ಮಪ್ರಚಾರ ಸೇವೆಯ ಮೇಲೆ ಕಳುಹಿಸಿದ್ದಾನೆ. ಕ್ರಿಸ್ತನ ಕಡೇ ದಿವಸದ ರಕ್ಷಣಾ ಯೋಜನೆಯಲ್ಲಿ ಆತನೊಂದಿಗೆ ಸಹಕರಿಸುವುದಕ್ಕಿಂತ ಹೆಚ್ಚಿನದನ್ನು ನೆರವೇರಿಸುವುದು ಏನೂ ಇಲ್ಲ.

ಕ್ರಿಸ್ತನು ಬೇಗನೆ ಬರುತ್ತಾನೆಯೇ? ಯೋಹಾನನು ಆ ಮಾತುಗಳನ್ನು ಸುಮಾರು 2000 ವರ್ಷಗಳ ಹಿಂದೆಯೇ ಬರೆದಿದ್ದಾನೆ. ಸತ್ತವರ ಸ್ಥಿತಿಯ ಬಗ್ಗೆ ತಿಳುವಳಿಕೆಯನ್ನು ನಮಗೆ ನೀಡಿದ್ದಾಗ್ಯೂ, ನಮ್ಮ ವೈಯಕ್ತಿಕ ಅನುಭವದಲ್ಲಿ ನಮ್ಮಲ್ಲಿ ಪ್ರತಿಯೊಬ್ಬರಿಗೂ ಕ್ರಿಸ್ತನ ಎರಡನೆಯ ಬರೋಣವು, ನಮ್ಮ ಮರಣದ ನಂತರ ಒಂದು ಕ್ಷಣಕ್ಕಿಂತ ಹೆಚ್ಚೆನಿಸುವುದಿಲ್ಲ ಯಾಕೆ?

**ಮಂಗಳವಾರ** **ಸೆಪ್ಟೆಂಬರ್ 15**

## ಪ್ರಕಟನೆಯ ಅಂತ್ಯಕಾಲದ ಸಂದೇಶ

ಪ್ರಕಟನೆ ಪುಸ್ತಕದ ಕೇಂದ್ರಬಿಂದು 14ನೇ ಅಧ್ಯಾಯವಾಗಿದೆ. ಮಾನವನ ಇತಿಹಾಸದ ಕಡೆಯ ದಿನಗಳಲ್ಲಿ ಜೀವಿಸುತ್ತಿರುವ ದೇವರ ಜನರಿಗೆ ಈ ಅಧ್ಯಾಯವು ಅತ್ಯಂತ ಮಹತ್ವಪೂರ್ಣವಾಗಿದೆ. ಇದು ಮನುಕುಲಕ್ಕೆ ದೇವರ ಕಡೆಯ ದಿವಸದ ಸಂದೇಶವನ್ನು ತೆರೆದಿಡುತ್ತದೆ. ಈ ಅಂತ್ಯಕಾಲದ ಸಂದೇಶವು ದೇವರ ಜನರಿಗೂ ಹಾಗೂ ಎಲ್ಲಾ ಮನುಕುಲಕ್ಕೆ ನಿರ್ಣಾಯಕವಾಗಿದೆ.

ಪ್ರಕಟನೆ 14:14–20 ಓದಿರಿ. ನಮ್ಮ ಕರ್ತನ ಪುನರಾಗಮನವನ್ನು ಚಿತ್ರಿಸಲು ಇಲ್ಲಿ ಯಾವ ಸಂಕೇತವನ್ನು ಬಳಸಲಾಗುತ್ತದೆ?

ಕ್ರಿಸ್ತನ ಪುನರಾಗಮನವನ್ನು ವಿವರಿಸಲು ಸತ್ಯವೇದದಾದ್ಯಂತ ಸುಗ್ಗಿಯ ಸಂಕೇತವನ್ನು ಬಳಸಲಾಗಿದೆ (ಮತ್ತಾಯ 13:37–43, ಮಾರ್ಕ 4;29). ಪ್ರಕಟನೆ 14ರಲ್ಲಿ 'ಕಟಾವಿಗೆ (ಸುಗ್ಗಿಗೆ) ಸಿದ್ಧವಾದ ಧಾನ್ಯವು' 'ನೀತಿವಂತನ ವಿಮೋಚನೆಯನ್ನು' ಪ್ರತಿನಿಧಿಸುತ್ತದೆ ಮತ್ತು ಅತಿಯಾಗಿ ಮಾಗಿದ ದ್ರಾಕ್ಷಿಹಣ್ಣಿನ ಸುಗ್ಗಿಯು ದುಷ್ಟರ ನಾಶನವನ್ನು ಚಿತ್ರಿಸುತ್ತದೆ. ಪ್ರಕಟನೆ 14:6–12ರಲ್ಲಿ ಭೂಮಿಯ ಅಂತಿಮ ಸುಗ್ಗಿಗಾಗಿ ಸ್ತ್ರೀ ಮತ್ತು ಪುರುಷರು ಸಿದ್ಧಪಡಿಸುವುದಕ್ಕೆ ಕಡೇ ದಿವಸದ ತುರ್ತು ಸಂದೇಶವನ್ನು ಒಳಗೊಂಡಿದೆ.

ಪ್ರಕಟನೆ 14:6,7 ಓದಿರಿ. ಈ ಎರಡು ವಚನಗಳಲ್ಲಿ ಕಂಡುಬರುವ ಸಂದೇಶದ ಸಾರಾಂಶವೇನು? ಸೆವೆಂತ್–ಡೇ ಅಡ್ವೆಂಟಿಸ್ಟ್‌ಗಳಾಗಿ ನಾವು ಯಾರೆಂದು ಅರ್ಥ ಮಾಡಿಕೊಳ್ಳಲು ಇವುಗಳು ನಮಗೆ ಹೇಗೆ ಸಹಾಯ ಮಾಡುತ್ತದೆ?

ಪ್ರಕಟನೆ 14ರಲ್ಲಿರುವ ಮೊದಲನೆಯ ದೇವದೂತನ ಸಂದೇಶವು 21ನೇ ಶತಮಾನದ ಸಂತತಿಯವರಿಗೆ ತಮ್ಮ ಜೀವನದಲ್ಲಿರುವ ಉದ್ದೇಶಕ್ಕಾಗಿ ಹಾತೊರೆಯಬೇಕಾಗಿ ವಿನಂತಿಸುತ್ತದೆ. ಇದು ಎಲ್ಲರಿಗೂ ಪಾಪಕ್ಷಮಾಪಣೆಯನ್ನು ನೀಡುವ ದೇವರ ಕೃಪೆಯ ಸುವಾರ್ತೆಯನ್ನು ಪ್ರಸ್ತುತಪಡಿಸುತ್ತದೆ. ಇದು ನಮ್ಮನ್ನು ಪಾಪದ ಅಪರಾಧದಿಂದ ಶುದ್ಧಿಗೊಳಿಸುತ್ತದೆ ಮತ್ತು ಜಯ ಹೊಂದಿದವರಾಗಲು ನಮಗೆ ಬಲವನ್ನು ನೀಡುತ್ತದೆ. ಕ್ರಿಸ್ತನು ನಮ್ಮನ್ನು ಸೃಷ್ಟಿಸಿದ್ದಾನೆ ಮತ್ತು ನಮ್ಮನ್ನು ವಿಮೋಚಿಸಿದ್ದಾನೆ ಎಂಬ ಸತ್ಯದಲ್ಲಿ ಈ ಸಂದೇಶವು ಎಲ್ಲಾ ಸ್ವ–ಮೌಲ್ಯಗಳಿಗೆ ಆಧಾರವನ್ನು ನೀಡುತ್ತದೆ. ದೇವರ ಅಂತಿಮ ನ್ಯಾಯತೀರ್ಪಿನ ದಿನದಲ್ಲಿ ಎಲ್ಲಾ ಅನ್ಯಾಯಗಳು ಕೊನೆಗೊಳ್ಳುತ್ತವೆ ಎಂದು ಇದು ತೋರಿಸುತ್ತದೆ. ಅನೀತಿವಂತಿಕೆಯು ಎಂದೆಂದಿಗೂ ಉಳಿಯುವುದಿಲ್ಲವೆಂದು ಇದು ಪ್ರಕಟಿಸುವ ಕಾರಣದಿಂದಾಗಿ ಇದು ನಂಬಲಾಗದಷ್ಟು ಒಳ್ಳೆಯ ಸುದ್ದಿಯಾಗಿದೆ.

ಸೆವೆಂತ್–ಡೇ ಅಡ್ವೆಂಟಿಸ್ಟರನ್ನು ಲೋಕಕ್ಕೆ ಬೆಳಕನ್ನು ಹರಿಸುವವರಾಗಿ ಮತ್ತು ಕಾವಲುಗಾರರನ್ನಾಗಿ ಇಡಲಾಗಿದೆಯೆಂದು ಒಂದು ವಿಶೇಷ ಅರ್ಥದಲ್ಲಿ ಹೇಳಲಾಗಿದೆ. ನಶಿಸಿ ಹೋಗುತ್ತಿರುವ ಲೋಕಕ್ಕೆ ಕೊನೆಯ ಎಚ್ಚರಿಕೆಯ ಸಂದೇಶವನ್ನು ನೀಡಲು ಇವರ ಕೈಗೆ ಒಪ್ಪಿಸಲಾಗಿದೆ.

ದೇವರ ವಾಕ್ಯವೆಂಬ ಅದ್ಭುತ ಬೆಳಕು ಇವರ ಮೇಲೆ ಹೊಳೆಯುತ್ತಿದೆ. ಮೊದಲನೆಯ, ಎರಡನೆಯ ಮತ್ತು ಮೂರನೆಯ ದೇವದೂತನ ಸಂದೇಶಗಳನ್ನು ಪ್ರಚುರಪಡಿಸುವ ಅತ್ಯಂತ ಗಂಭೀರದ ಕೆಲಸವನ್ನು ಇವರಿಗೆ ನೀಡಲಾಗಿದೆ. ಇದಕ್ಕಿಂತ ಮಹತ್ವವಾದ ಕೆಲಸ ಬೇರೊಂದಿಲ್ಲ. ಬೇರೊಬ್ಬರ ಗಮನವನ್ನು ಸಂಪೂರ್ಣವಾಗಿ ಇವರ ಕಡೆಗೆ ಸೆಳೆಯಲು ಮಾತ್ರ ಇವರನ್ನು ಅನುಮತಿಸಲಾಗಿದೆ- ಎಲೆನ್ ಜಿ ವೈಟ್, ಇವಾಂಜೆಲಿಸಮ್, ಪುಟಗಳು 119, 120. ಒಂದು ಸಭೆಯಾಗಿ ಇನ್ನೂ ಮುಖ್ಯವಾಗಿ ಒಬ್ಬ ವ್ಯಕ್ತಿಯಾಗಿ, ಈ ಮಾತುಗಳನ್ನು ನಮ್ಮ ಹೃದಯಕ್ಕೆ ಹೇಗೆ ತೆಗೆದುಕೊಳ್ಳಬಹುದು?

**ಬುಧವಾರ** **ಸೆಪ್ಟೆಂಬರ್ 16**

## ದೇವರ ಸಂದೇಶವನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳುವುದು

ಪ್ರಕಟನೆಯ ಕಡೇ ದಿವಸದ ಸಂದೇಶವು ಎಲ್ಲಾ ಮನುಕುಲವನ್ನು ರಕ್ಷಿಸುವುದಕ್ಕಾಗಿ ಯೇಸು ಆತನ ಪರಿಪೂರ್ಣತೆಯೊಳಗಿನ ಕೃಪೆಯಲ್ಲಿದ್ದಾನೆಂದು ಪ್ರಸ್ತುತಪಡಿಸುತ್ತದೆ (ಪ್ರಕಟನೆ 14:6). ದೇವರ ನ್ಯಾಯತೀರ್ಪಿನ ಬೆಳಕಿನಡಿಯಲ್ಲಿ ಆತನ ಆಜ್ಞೆಗಳನ್ನು ಗೌರವಿಸಲು ಮತ್ತು ಆತನ ಧರ್ಮಶಾಸ್ತ್ರಕ್ಕೆ ವಿಧೇಯರಾಗಲು- ನಾವು ಮಾಡುವ ಎಲ್ಲಾ ಕೆಲಸದಲ್ಲಿಯೂ ದೇವರಿಗೆ ಭಯಪಡಬೇಕು ಅಥವಾ ಗೌರವ ಸಲ್ಲಿಸಬೇಕು ಎಂಬ ಪ್ರಾಮಾಣಿಕ ಮನವಿ ಇದಾಗಿದೆ (ಪ್ರಕಟನೆ 14:7). "ದೇವರಿಗೆ ಭಯಪಡು" ಎನ್ನುವುದು ನಾವು ಹೇಗೆ ಆಲೋಚಿಸುತ್ತೇವೆ ಎಂಬುದರ ಮೇಲೆ ನಿಂತಿದೆ. ದೇವರನ್ನು ಮೆಚ್ಚಿಸುವುದಕ್ಕಾಗಿ ಮತ್ತು ನಮ್ಮ ಎಲ್ಲಾ ಆಲೋಚನೆಗಳಲ್ಲಿ ಆತನನ್ನು ಪ್ರಥಮ ಸ್ಥಾನದಲ್ಲಿಡುವುದಕ್ಕಾಗಿ ಜೀವಿಸಬೇಕು ಎಂಬ ಮನವಿ ಇದಾಗಿದೆ. ಇದು ವಿಧೇಯತೆಯ ನಡತೆಯಾಗಿದ್ದು, ದೈವಿಕ ಜೀವನವನ್ನು ಜೀವಿಸಲು ನಮ್ಮನ್ನು ಮುನ್ನಡೆಸುತ್ತದೆ (ಜ್ಞಾನೋ 3:7; ಅಪೋ 9:31; 1 ಪೇತ್ರ 2:17). ಈ ಸಂದೇಶವು ದೇವರಿಗೆ "ಘನಪಡಿಸಿರಿ" ಎಂದು ಸಹ ಆಹ್ವಾನಿಸುತ್ತದೆ. ದೇವರನ್ನು "ಘನಪಡಿಸಿರಿ" ಎನ್ನುವುದು ನಮ್ಮ ಜೀವನದ ಪ್ರತಿ ವಿಷಯದಲ್ಲಿ ನಾವು ಏನು ಮಾಡುತ್ತೇವೆ ಎಂಬುದಕ್ಕೆ ಸಂಬಂಧಿಸಿದೆ.

ಪ್ರಸಂಗಿ 12:13,14 ಮತ್ತು 1 ಕೊರಿಂಥ 6:19,20 ಓದಿರಿ. ದೇವರಿಗೆ ಭಯಪಡಿರಿ ಮತ್ತು ಆತನನ್ನು ಘನಪಡಿಸಿರಿ, ಇವೆರಡರ ಅರ್ಥವೇನೆಂದು ತಿಳಿದುಕೊಳ್ಳಲು ಈ ವಚನಗಳು ನಮಗೆ ಹೇಗೆ ಸಹಾಯ ಮಾಡುತ್ತವೆ?

ನೈತಿಕ ಬೇಜವಾಬ್ದಾರಿಯುತ ಯುಗದಲ್ಲಿ, ಲಕ್ಷಾಂತರ ಜನರು ತಮ್ಮನ್ನು ಹೊರತುಪಡಿಸಿ ಬೇರ್ಯಾರಿಗೂ ತಾವು ಹೊಣೆಗಾರರಾಗುವುದಿಲ್ಲ ಎಂದು ಭಾವಿಸಿದಾಗ, ಈ ನ್ಯಾಯತೀರ್ಪಿನ ಗಳಿಗೆಯ ಸಂದೇಶವು ನಾವು ಮಾಡುವ ಕೃತ್ಯಗಳಿಗೆ ನಾವೇ ಹೊಣೆಗಾರರೆಂದು ನೆನಪಿಸುತ್ತದೆ. ದೇವರಿಗೆ ತೋರಿಸುವ ಭಯಭಕ್ತಿಯ ನಡತೆ, ದೇವರಿಗೆ ವಿಧೇಯತೆ ಮತ್ತು ತೀರ್ಪಿನ ನಡುವೆ ಸಂಬಂಧವಿದೆ. ವಿಧೇಯತೆಯು ಯೇಸುವಿನೊಂದಿಗೆ ರಕ್ಷಿಸುವ ಫಲವಾಗಿದೆ. ಆತನ ನೀತಿಯ ಮಾತ್ರ ತೀರ್ಪನ್ನು ಹೊರಡಿಸುವುದಕ್ಕೆ ಅರ್ಹವಾಗಿದೆ ಮತ್ತು ಆತನ ನೀತಿಯಲ್ಲಿ, ನಾವು ಸುರಕ್ಷಿತರಾಗಿದ್ದೇವೆ. ಆತನ ನೀತಿಯ ಮೂಲಕ ನಾವು ಮಾಡುವ ಎಲ್ಲಾ ಕೆಲಸದಲ್ಲೂ ಆತನ ಹೆಸರನ್ನು ಘನಪಡಿಸುವುದಕ್ಕೆ ನಾವು ಜೀವಿಸುತ್ತೇವೆ.

ಪ್ರಕಟನೆ 14:7; ಪ್ರಕಟನೆ 4:11, ಆದಿಕಾಂಡ 2:1–3 ಮತ್ತು ವಿಮೋಚನಕಾಂಡ 20:8–11 ಓದಿರಿ. ದೇವರ ಎಲ್ಲಾ ಸತ್ಯ ಆರಾಧನೆಯ ಆಧಾರ ಯಾವುದು, ಮತ್ತು ಈ ತಿಳುವಳಿಕೆಯು ಸಬ್ಬತ್ತನ್ನು ಹೇಗೆ ಪ್ರತಿಬಿಂಬಿಸುತ್ತದೆ?

ಸಬ್ಬತ್ತು ಆರಾಧನೆಯ ಹೃದಯದ ಭಾಗವೆಂದು ಸೈತಾನನಿಗೆ ತಿಳಿದಿರುವ ಕಾರಣದಿಂದಾಗಿ ಅವನು ಅದರ ಮೇಲೆ ಆಕ್ರಮಣ ಮಾಡಿದನು. ಅದು ಕ್ರಿಸ್ತನನ್ನು ಸೃಷ್ಟಿಕರ್ತನೆಂದು ಹೊಗಳುತ್ತದೆ ಮತ್ತು ಭೂಲೋಕ ಮತ್ತು ಪರಲೋಕಗಳನ್ನು ಉಂಟುಮಾಡಿದಾತನಿಗೆ ನಮಸ್ಕರಿಸಿರಿ (ಪ್ರಕಟನೆ 14:7) ಎಂದು ಎಲ್ಲಾ ಕಡೆಯಲ್ಲಿರುವ ಸ್ತ್ರೀಯರು ಮತ್ತು ಪುರುಷರಿಗೆ ಇದು ಮನವಿ ಮಾಡುತ್ತದೆ. ವಿಕಾಸದ ಯುಗದಲ್ಲಿ ಇದು ಸಮಂಜಸವಾಗಿ ಮಾತನಾಡುತ್ತದೆ. ನಮ್ಮನ್ನು ಸೃಷ್ಟಿಸಿದಾತನ ಮತ್ತು ಆತನಲ್ಲಿರುವ ನಮ್ಮ ನಿಜವಾದ ಮೌಲ್ಯದ ಅರ್ಥವನ್ನು ನಮಗೆ ನೀಡಿದಾತನಾದ ಯೇಸುವನ್ನು ಆರಾಧಿಸುವುದಕ್ಕೆ ಹಿಂತಿರುಗಲು ಅದು ನಮ್ಮನ್ನು ಕರೆಯುತ್ತದೆ.

ದೇವರ ಸೃಷ್ಟಿಕರ್ತನೆಂದು ಜ್ಞಾಪಿಸುವ ಸಬ್ಬತ್ ದಿನವು ಎಷ್ಟು ಮಹತ್ವದ್ದಾಗಿದೆ ಮತ್ತು ಆತನೊಬ್ಬನೇ ನಮ್ಮ ಆರಾಧನೆಗೆ ಯೋಗ್ಯನು ಎಂಬುದರ ಬಗ್ಗೆ ಆಲೋಚಿಸಿರಿ. ಅದಾದನಂತರ, ಆತನು ನಮ್ಮ ಸೃಷ್ಟಿಕರ್ತನೆಂದು ನೆನಪಿಸಿಕೊಳ್ಳುವುದಕ್ಕೆ ನಮಗೆ ಸಹಾಯ ಮಾಡಲು, ಪ್ರತಿವಾರ ನಮ್ಮ ಜೀವನದ ಏಳರಲ್ಲಿ ಒಂದು ಭಾಗವನ್ನು ಆಜ್ಞಾಪಿಸಿದ್ದಾನೆ. ದೇವರು ಆಜ್ಞಾಪಿಸಿದ ಇತರ ಯಾವ ಬೋಧನೆಗಳು ತುಂಬಾ ಪ್ರಾಮುಖ್ಯವಾಗಿದೆ?

**ಗುರುವಾರ** **ಸೆಪ್ಟೆಂಬರ್ 17**

## ದೇವರ ಅಂತಿಮ ಮನವಿ

ಪ್ರಕಟನೆ 14:8; ಪ್ರಕಟನೆ 17:3–6 ಮತ್ತು ಪ್ರಕಟನೆ 18:1–4 ಓದಿರಿ. ಈ ವಾಕ್ಯಗಳಿಂದ ಆಧ್ಯಾತ್ಮಿಕ ಬಾಬೆಲ್ ಬಗ್ಗೆ ನಾವು ಏನು ಕಲಿಯುತ್ತೇವೆ?

ಪ್ರಕಟನೆಯ ಪುಸ್ತಕದಲ್ಲಿ, "ಬಾಬೆಲ್" ಎಂಬ ಪದವು ಮನುಷ್ಯನ ಕೆಲಸಗಳು, ಮಾನವ ನಿರ್ಮಿತ ಸಂಪ್ರದಾಯಗಳು ಮತ್ತು ಸುಳ್ಳು ಸಿದ್ಧಾಂತಗಳ ಮೇಲೆ ಆಧರಿಸಲಾದ ಸುಳ್ಳು ಧಾರ್ಮಿಕ ವ್ಯವಸ್ಥೆಯನ್ನು ಪ್ರತಿನಿಧಿಸುತ್ತದೆ. ಅದು ಯೇಸು ಮತ್ತು ಆತನ ಪಾಪರಹಿತ ಜೀವನಕ್ಕಿಂತ ಮನುಷ್ಯರ ಮತ್ತು ಅವರ ಸ್ವನೀತಿಯನ್ನು ಉನ್ನತಿಗೇರಿಸುತ್ತದೆ. ಅದು ದೇವರ ಆಜ್ಞೆಗಳಿಗಿಂತ ಮಾನವ ಧಾರ್ಮಿಕ ಶಿಕ್ಷಕರ ಆಜ್ಞೆಗಳನ್ನು ಇರಿಸುತ್ತದೆ. ಬಾಬೆಲ್ ವಿಗ್ರಹಾರಾಧನೆಯ, ಸೂರ್ಯ ಆರಾಧನೆಯ, ಮತ್ತು ಆತ್ಮದ ಅಮರತ್ವದ ಸುಳ್ಳುಬೋಧನೆಯ ಕೇಂದ್ರವಾಗಿತ್ತು. ಈ ಸುಳ್ಳು ಧಾರ್ಮಿಕ ವ್ಯವಸ್ಥೆಯು ಪ್ರಾಚೀನ ಬಾಬೆಲ್‌ನ ಅನೇಕ ಧಾರ್ಮಿಕ ಪದ್ಧತಿಗಳನ್ನು ಅದರ ಆರಾಧನೆಯೊಳಗೆ ತಂತ್ರಯುತವಾಗಿ ಒಟ್ಟಿಗೆ ಸಂಯೋಜಿಸಲಾಯಿತು. ನಶಿಸಿ ಹೋಗುತ್ತಿರುವ ನಮ್ಮ ಗ್ರಹಕ್ಕೆ ದೇವರ ಕಡೇ ದಿವಸದ ಸಂದೇಶವೇನೆಂದರೆ ಯೇಸುವಿನ ಸಂದೇಶ ಮತ್ತು ಆತನ ನೀತಿಯ ಸಂದೇಶವಾಗಿದೆ. "ಬಿದ್ದಳು ಬಿದ್ದಳು, ಬಾಬೆಲೆಂಬ ಮಹಾನಗರಿ ಬಿದ್ದಳು.... ನನ್ನ ಪ್ರಜೆಗಳೇ ಅವಳನ್ನು ಬಿಟ್ಟು ಬನ್ನಿರಿ" (ಪ್ರಕಟನೆ 18:2,4) ಎಂಬ ಪರಲೋಕದ ಮನವಿಯನ್ನು ಇದು ಪ್ರತಿಧ್ವನಿಸುತ್ತದೆ. ಕ್ರಿಸ್ತನ ಸಂದೇಶವನ್ನು ಅದರ ಎಲ್ಲಾ ಪರಿಪೂರ್ಣತೆಯಲ್ಲಿ ಎತ್ತಿ ಹಿಡಿಯಲು ದೇವರು ದೈವಿಕವಾಗಿ ಸೆವೆಂತ್–ಡೇ ಅಡ್ವೆಂಟಿಸ್ಟ್ ಸಭೆಯನ್ನು

ಎಬ್ಬಿಸಿದ್ದಾನೆ. ಯೇಸುವನ್ನು ಉನ್ನತಿಗೇರಿಸುವುದು ಎಂದರೆ ಆತನು ಬೋಧಿಸಿದ ಎಲ್ಲವನ್ನೂ ಮೇಲಕ್ಕೆತ್ತಿ ಹಿಡಿಯುವುದಾಗಿದೆ. ನಾನೇ ಮಾರ್ಗವೂ, ಸತ್ಯವೂ, ಜೀವವೂ" (ಯೋಹಾನ 14:6) ಆಗಿರುವಾತನನ್ನು ಅದು ಪ್ರಚುರಪಡಿಸುತ್ತದೆ. ಯೇಸುವಿನ ಸತ್ಯಗಳಿಗೆ ವಿರುದ್ಧವಾಗಿರುವ ಬಾಬೆಲಿನ ದೋಷಗಳನ್ನು ಅದು ತೆರೆದಿಡುತ್ತದೆ.

ಪ್ರಕಟನೆ 14:7, 9–11 ಓದಿರಿ. ಈ ವಚನಗಳಲ್ಲಿ ಆರಾಧನೆಯ ಯಾವ ವಿಭಿನ್ನ ಉದ್ದೇಶಗಳನ್ನು ಎತ್ತಿ ತೋರಿಸಲಾಗಿದೆ?

ಪ್ರಕಟನೆ 14ರಲ್ಲಿ ಸೃಷ್ಟಿಕರ್ತನ ಆರಾಧನೆ ಮತ್ತು ಮೃಗದ ಆರಾಧನೆ ಎಂಬ ಎರಡು ವಿಧದ ಆರಾಧನೆಯ ಕಾರ್ಯಗಳನ್ನು ವಿವರಿಸುತ್ತದೆ. ನಿಜವಾದ ಸಬ್ಬತ್ ಮತ್ತು ಬದಲಿ ಅಥವಾ ನಕಲಿ ಸಬ್ಬತ್ ಎಂಬ ಈ ಎರಡು ಆರಾಧನೆಯ ಕಾರ್ಯಗಳು ದೇವರ ಆರಾಧನೆಯ ದಿನದ ಸುತ್ತ ಕೇಂದ್ರೀಕರಿಸುತ್ತದೆ. ಸಬ್ಬತ್ ನಮ್ಮ ಸೃಷ್ಟಿಕರ್ತನೂ, ವಿಮೋಚನೂ ಮತ್ತು ಬರುವ ರಾಜನಾದ ಕ್ರಿಸ್ತನಲ್ಲಿ ನಾವು ಹೊಂದಿರುವ ವಿಶ್ರಾಂತಿ, ಭರವಸೆ ಮತ್ತು ಸುರಕ್ಷತೆಯನ್ನು ಪ್ರತಿನಿಧಿಸುತ್ತದೆ. ನಕಲಿ ದಿನವು ಮಾನವ ನಿರ್ಮಿತ ಕಟ್ಟಳೆಗಳು ಮತ್ತು ಮಾನವನ ವಾದದ ಮೇಲೆ ಆಧರಿಸಲಾದ ಒಬ್ಬ ಮನುಷ್ಯ ಮತ್ತು ಸುಳ್ಳು ಬದಲಿಯನ್ನು ಪ್ರತಿನಿಧಿಸುತ್ತದೆ.

ಪ್ರಕಟನೆ 14:12 ಓದಿರಿ. ವಿಶೇಷವಾಗಿ ಯಾವುದು ಮೊದಲು ಬಂದಿತ್ತು ಎಂಬ ಹಿನ್ನೆಲೆಯಲ್ಲಿ ಈ ವಾಕ್ಯವು ಏನು ಹೇಳುತ್ತದೆ? ಈ ವಾಕ್ಯದಲ್ಲಿ ಧರ್ಮಶಾಸ್ತ್ರ ಮತ್ತು ಕೃಪೆಗಳೆರಡು ಹೇಗೆ ಪ್ರಕಟಿಸಲ್ಪಟ್ಟಿವೆ ಮತ್ತು ಧರ್ಮಶಾಸ್ತ್ರ ಕೃಪೆಗಳೆರಡು ಸುವಾರ್ತೆಯ ಬೇರ್ಪಡಿಸಲಾಗದ ಅಂಶಗಳಾಗಿವೆ ಎಂಬುದರ ಕುರಿತು ಇದು ನಮಗೇನು ಕಲಿಸಬೇಕು?

**ಶುಕ್ರವಾರ ಸೆಪ್ಟೆಂಬರ್ 18**

**ಹೆಚ್ಚಿನ ಚಿಂತನೆ :** ದೇವರು ಪ್ರಾಚೀನ ಇಸ್ರಾಯೇಲ್ಯರನ್ನು ಭೂಮಿಯ ಮೇಲೆ ಬೆಳಕಾಗಿ ನಿಲ್ಲುವುದಕ್ಕೆ ಕರೆದಂತೆಯೇ, ಈ ದಿನದಲ್ಲಿ ಆತನು ತನ್ನ ಸಭೆಯನ್ನು ಕರೆಯುತ್ತಾನೆ– ಸತ್ಯದ ಪ್ರಬಲ ಕಡುಗತ್ತಿಯ ಮೂಲಕ – ಮೊದಲನೆಯ, ಎರಡನೆಯ ಮತ್ತು ಮೂರನೆಯ ದೇವದೂತನ ಸಂದೇಶಗಳನ್ನು

ತನಗೆ ಹತ್ತಿರವಾದ ಪವಿತ್ರತೆಯೊಳಗೆ ಅವುಗಳನ್ನು ತರಲು, ಆತನು ಸಭೆಗಳಿಂದ ಮತ್ತು ಲೋಕದಿಂದ ಅವುಗಳನ್ನು ಬೇರ್ಪಡಿಸಿದನು. ಆತನು ತನ್ನ ಧರ್ಮಪ್ರಮಾಣದ ಪಾರುಪತ್ಯಗಾರರನ್ನಾಗಿ ಅವುಗಳನ್ನು ಮಾಡಿದ್ದಾನೆ ಮತ್ತು ಈ ಸಹಾಯಕ್ಕಾಗಿ, ಪ್ರವಾದನೆಯ ದೊಡ್ಡ ಸತ್ಯಗಳನ್ನು ಅವುಗಳಿಗೆ ಒಪ್ಪಿಸಿದ್ದಾನೆ. ಪ್ರಾಚೀನ ಇಸ್ರಾಯೇಲ್ಯರಿಗೆ ಪವಿತ್ರ ದಿವ್ಯವಾಣಿಗಳಂತೆ ಒಪ್ಪಿಸಿಕೊಡಲಾದ ಈ ಪವಿತ್ರ ಭರವಸೆಯನ್ನು ಜಗತ್ತಿಗೆ ತಿಳಿಸಬೇಕಾಗಿದೆ.

ಪ್ರಕಟನೆ 14ರ ಮೂರು ದೇವದೂತರು 'ದೇವರ ಸಂದೇಶದ ಬೆಳಕನ್ನು ಅಂಗೀಕರಿಸಿಕೊಂಡು ಮತ್ತು ಆತನ ಪ್ರತಿನಿಧಿಗಳಂತೆ ಭೂಮಿಯ ಕಟ್ಟಕಡೆಯವರೆಗೂ ಎಚ್ಚರಿಸಲು ಹೊರಟ ಜನರನ್ನು' ಪ್ರತಿನಿಧಿಸುತ್ತಾರೆ. 'ನೀವು ಲೋಕಕ್ಕೆ ಬೆಳಕಾಗಿದ್ದೀರಿ' (ಮತ್ತಾಯ 5:4) ಎಂದು ಕ್ರಿಸ್ತನು ತನ್ನ ಹಿಂಬಾಲಕರಿಗೆ ಘೋಷಿಸುತ್ತಾನೆ: "ಇಗೋ ಆತ್ಮದ ಬೆಲೆ", "ನೀವು ಲೋಕದ ಎಲ್ಲಾ ಕಡೆಗೆ ಹೋಗಿ ಜಗತ್ತಿಗೆಲ್ಲಾ ಸುವಾರ್ತೆಯನ್ನು ಸಾರಿರಿ" (ಮಾರ್ಕ 16:15). ಈ ಕೆಲಸಕ್ಕೆ ಅಡ್ಡಿಪಡಿಸಲು ಯಾವುದನ್ನೂ ಅನುಮತಿಸಲಾಗುವುದಿಲ್ಲ. ಇದು ನಮ್ಮ ಕಾಲಕ್ಕೆ ಬಹುಮುಖ್ಯ ಕೆಲಸವಾಗಿದೆ. ಅದು ನಿತ್ಯತ್ವದಂತೆ ಬಹಳ ಪ್ರಭಾವ ಬೀರುತ್ತದೆ. ಮನುಷ್ಯರ ಆತ್ಮಗಳ ವಿಮೋಚನೆಗಾಗಿ ಆತನು ಮಾಡಿದ ಬಲಿದಾನದಲ್ಲಿ ಯೇಸುವಿನ ಪ್ರೀತಿ ವ್ಯಕ್ತವಾಗುತ್ತದೆ ಮತ್ತು ಆತನ ಎಲ್ಲಾ ಅನುಯಾಯಿಗಳನ್ನು ಕಾರ್ಯಗತಗೊಳಿಸುತ್ತದೆ.

"ಆತನಿಗೆ ಶರಣಾದ ಪ್ರತಿಯೊಂದು ಮಾನವನ ಕಾರ್ಯಭಾಗವನ್ನು "ಕ್ರಿಸ್ತನು ತುಂಬಾ ಸಂತೋಷದಿಂದ ಸ್ವೀಕರಿಸುತ್ತಾನೆ!" ಆತನು ಮನುಷ್ಯರನ್ನು ದೈವಿಕತೆಯೊಂದಿಗಿನ ಸಂಯೋಜನೆಗೆ ತರುತ್ತಾನೆ, ಆತನು ನರಾವತಾರ ಪ್ರೀತಿಯ ರಹಸ್ಯಗಳನ್ನು ಜಗತ್ತಿಗೆ ತಿಳಿಸಬಹುದು. ಆತನ ಸತ್ಯದ ಸಂದೇಶದೊಂದಿಗೆ ಜಗತ್ತನ್ನು ತುಂಬಿಸಲು, ಮಾತನಾಡಿರಿ, ಪ್ರಾರ್ಥನೆ ಮಾಡಿರಿ, ಹಾಡಿರಿ ಮತ್ತು ಪ್ರದೇಶಗಳ ಆಚೆಗೆಮುನ್ನುಗ್ಗುತ್ತಾ ಹೋಗಿರಿ" – ಎಲೆನ್ ಜಿ ವೈಟ್ ಕೌನ್ಸೆಲ್ಸ್ ಫಾರ್ ದಿ ಚರ್ಚ್, ಪುಟಗಳು 58, 59.

## ಚರ್ಚಿಸಬೇಕಾದ ಪ್ರಶ್ನೆಗಳು

1. ಪ್ರಕಟನೆ 14ರ ಮೂರು ದೇವದೂತರ ಸಂದೇಶಗಳು ಸೆವೆಂತ್‌–ಡೇ ಅಡ್ವೆಂಟಿಸ್ಟ್ ಸಭೆಯ ಮಹತ್ವವನ್ನು ಹೇಗೆ ಗುರುತಿಸುತ್ತದೆ?

2. ಸಬ್ಬತ್ ಮತ್ತು ಅದು ಪ್ರತಿನಿಧಿಸುವ ಪ್ರಾಮುಖ್ಯತೆಯ ಬಗ್ಗೆ ಯೋಚಿಸಿರಿ. ಈ ವಾರ ನಾವು ನೋಡಿದಂತೆಯೇ, ಅದರಲ್ಲಿರುವ ಸಂದೇಶವು ಎಷ್ಟು ಮಹತ್ವದ್ದಾಗಿದೆಯೆಂದರೆ, ಆತನನ್ನು ನಮ್ಮ ಸೃಷ್ಟಿಕರ್ತನೆಂತಲೂ ಮತ್ತು ನಮ್ಮ ವಿಮೋಚಕನೆಂತಲೂ ನೆನಪಿಟ್ಟುಕೊಳ್ಳುವುದಕ್ಕೆ ನಾವು ನಮ್ಮ ಜೀವನದ ಏಳನೆಯ ಒಂದು ಭಾಗವನ್ನು ಪ್ರತ್ಯೇಕಿಸಬೇಕೆಂದು ದೇವರು ಆಜ್ಞಾಪಿಸುತ್ತಾನೆ. ಅಲ್ಲದೆ, ಪರಿಶುದ್ಧ ಪರ್ವತ ಅಥವಾ ಪರಿಶುದ್ಧ ಪಟ್ಟಣಕ್ಕಿಂತ ಭಿನ್ನವಾಗಿರುವ ಕಡೆಗೆ ನಾವು ಆರಾಧನೆಗೆ ಹೋಗಬೇಕಾಗಿಲ್ಲ. ಪ್ರತಿವಾರ, ಗಂಟೆಗೆ ಸುಮಾರು ಸಾವಿರ ಮೈಲಿಗಳಷ್ಟು, ವೇಗದಲ್ಲಿ (ಕನಿಷ್ಟ ಪಕ್ಷ, ಸಮಾಭಾಜಕ ವೃತ್ತದ ಹತ್ತಿರ), ಸಬ್ಬತ್ ನಮ್ಮ ಬಳಿಗೆ ಬರುತ್ತದೆ. ಈ ದಿನದ ಮಹತ್ವವನ್ನು ಅರ್ಥಮಾಡಿಕೊಳ್ಳಲು ಈ ಸತ್ಯವು ನಮಗೆ ಹೇಗೆ ಸಹಾಯ ಮಾಡುತ್ತದೆ? ಅದು ಏನನ್ನು ಸೂಚಿಸುತ್ತದೆ?

3. ಬಾಬೆಲಿನ ಪತನದ ಕಲ್ಪನೆಯನ್ನು ಮತ್ತು ಮೃಗದ ಗುರುತನ್ನು ಅತ್ಯಂತ ಅದ್ಭುತ ರೀತಿಯಲ್ಲಿ ಹೇಗೆ ವಿವರಿಸಬಹುದು? ಅಂದರೆ ನಮ್ಮ ಅತ್ಯುತ್ತಮ ಪ್ರಯತ್ನದ ಹೊರತಾಗಿಯೂ ಕೆಲವು ಜನರು ಮನನೊಂದಿದ್ದಾರೆ ಎಂದು ನಾವು ಅರ್ಥಮಾಡಿಕೊಂಡರು ಸಹ, ಈ ಸತ್ಯಗಳನ್ನು ಸಾಧ್ಯವಾದಷ್ಟು ಕಡಿಮೆ ಪ್ರಮಾಣದ ದಾಳಿಯಲ್ಲಿ ಪ್ರಸ್ತುತ ಪಡಿಸುವುದು ಹೇಗೆ?